(ಸಾಕ್ಷಿಯನ್ನು ದಿಃ 18-10-2019 ರಂದು ಕರೆಸಿ ಪ್ರಮಾಣ ವಚನ ಬೋಧಿಸಿ ಪಾಟಿ ಸವಾಲಿಗೆ ಒಳಪಡಿಸಲಾಯಿತು. )

**ಪಾಟಿ ಸವಾಲುಃ ಪ್ರತಿವಾದಿ ಪರವಾಗಿಃ ಶ್ರೀ ವಿ ಎ ಟಿ ವಕೀಲರಿಂದಃ**

ನನ್ನ ಅಜ್ಜನ ತಮ್ಮನ ಹೆಸರು ಹಸನ್ ಮೊಮಿನ್ ಎಂದು ಇರುತ್ತದೆ. ಅಬ್ದುಲ್ ಲತೀಫ್ ಮೊಮಿನ್ ನನ್ನ ಅಜ್ಜನಿಗೆ ತಂಗಿ ಗಂಡನಾಗಬೇಕು. ಅಬ್ದುಲ್ ಲತೀಫ್ ಮೊಮಿನ್ ಮತ್ತು ಅಹಮ್ಮದ್ ಮೊಮಿನ್ ಅಣ್ಣ ತಮ್ಮಂದಿರಾಗಬೇಕು ಎಂದರೆ ಸರಿಯಲ್ಲ. ಅಹಮ್ಮದ್ ಮೊಮಿನ್ ಗೆ 5 ಜನ ಗಂಡು ಮಕ್ಕಳು ಮತ್ತು ಇಬ್ಬರು ಹೆಣ್ಣು ಮಕ್ಕಳು ಎಂದರೆ ನಿಜ. ಅಬ್ದುಲ್ ಲತೀಫ್ ಮೊಮಿನ್ ಗೆ ಇಬ್ಬರು ಹೆಣ್ಣು ಮಕ್ಕಳು ಎಂದರೆ ನಿಜ. ಕುಲ್ಸುಂಬಿ ಮತ್ತು ಅಬ್ದುಲ್ ರಜಾಕ್ ರವರಿಗೆ ಮದುವೆಯಾಗಿಲ್ಲ ಎಂದರೆ ನಿಜ. ಕುಲ್ಸುಂಬಿ ಮತ್ತು ಅಬ್ದುಲ್ ರಜಾಕ್ ರವರು ಪ್ರತಿವಾದಿಯನ್ನು ದತ್ತಕ ತೆಗೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಯು ಕುಲ್ಸುಂಬಿ ಮತ್ತು ಅಬ್ದುಲ್ ರಜಾಕರವರ ಆರೋಗ್ಯ ಮತ್ತು ನಿರ್ವಹಣೆಯನ್ನು ನೋಡಿಕೊಳ್ಳುತ್ತಿದ್ದನು ಎಂದರೆ ಸರಿಯಲ್ಲ.

ದಿಃ 13-3-1979 ರಂದು ದಾವಾ ಸ್ವತ್ತನ್ನು ಕುಲ್ಸುಂಬಿ ಮತ್ತು ಅಬ್ದುಲ್ ರಜಾಕರವರು ಖರೀದಿಸಿದ್ದರು ಎಂದರೆ ಸಾಕ್ಷಿಯು ನಾನೂ ಸಹ ಖುದ್ದಾಗಿ ಪಾಲುದಾರನಾಗಿ ದಾವಾ ಸ್ವತ್ತನ್ನು ಖರೀದಿಸಿದ್ದೇನು ಎಂದು ನುಡಿದಿರುತ್ತಾರೆ. ಸದರಿ ಕ್ರಯ ಪತ್ರದಲ್ಲಿ ನನ್ನ ಹೆಸರು ನಮೂದಾಗಿಲ್ಲ. ಸರ್ವೆ ನಂ. 8 ಅ 1 ಕ ರಲ್ಲಿ 3 ಗುಂಟೆ 11 ಆಣೆ ಜಮೀನು ನನ್ನ ತಾಯಿ ಮರಿಯಾಂಬಿರವರ ಹೆಸರಿನಲ್ಲಿ ಇತ್ತು ಎಂದರೆ ನಿಜ. ದಾವಾ ಸ್ವತ್ತು ಸರ್ವೆ ನಂ. 8 ಅ 1 ಕ ರಲ್ಲಿ 3 ಗುಂಟೆ 9 ಆಣೆ ಜಮೀನು ಕುಲ್ಸುಂಬಿ ಮತ್ತು ಅಬ್ದುಲ್ ರಜಾಕರವರ ಹೆಸರಿನಲ್ಲಿ ಇತ್ತು ಎಂದರೆ ನಿಜ. ಸದರಿ ಸರ್ವೆ ನಂ. 8 ಅ 1 ಕ ರಲ್ಲಿ 3 ಗುಂಟೆ 9 ಆಣೆ ಜಮೀನು ಕುಲ್ಸುಂಬಿ ಮತ್ತು ಅಬ್ದುಲ್ ರಜಾಕರವರಿಗೆ ಕ್ರಯ ಪತ್ರದ ಮೂಲಕ ಬಂದಿತ್ತು ಎಂದರೆ ಸರಿಯಲ್ಲ.

ಈ ಹಂತದಲ್ಲಿ ಮಾನ್ಯ ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಪಾಟಿ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಕಾರವಾರ.